# ಮಣಿಕಾಂತ್ ಕದ್ರಿ ನಾದದಲೆಯ ಗುಂಗು

**ಅನೇಕ ವರ್ಷಗಳ ನಂತರ ಸಂಗೀತ ಪ್ರಧಾನ ಕನ್ನಡ ಸಿನಿಮಾವೊಂದು ತೆರೆಕಾಣುತ್ತಿದೆ (ಜ. 13ರಂದು). ಹಾನಗಲ್ಲ ಕುಮಾರಸ್ವಾಮಿ ಅವರ ಬದುಕಿನ ವೃತ್ತಾಂತ ಆಧರಿಸಿದ 'ವಿರಾಟಪುರದ ವಿರಾಗಿ' ಕಥನದಿಂದ ಮಾತ್ರವಲ್ಲ, ಸಂಗೀತದ ಮೂಲಕವೂ ಸಹೃದಯರ ಗಮನಸೆಳೆದಿದೆ.**

**ವಿಶಾಖ ಎನ್.**

'ಯಶಸ್ಸು ಎನ್ನುವುದಿಲ್ಲ. ಸದಾ ಹುಡುಕಾಟ ನಡೆಸುತ್ತಿರಬೇಕು', 'ಸಾಧನೆ ನಿನ್ನದಿರಲಿ, ಸಂಸ್ಕಾರ ಎನದಿರಲಿ', 'ಸಿನಿಮಾಗಳು ಸದಾ ಹಿಂದೆ ಇರಲಿ. ನಿನ್ನ ತುಡಿತ ಮುಂದೆ ಇರಲಿ'.

ಕದ್ರಿ ಗೋಪಾಲನಾಥ್ ತಮ್ಮ ಮಗ ಮಣಿಕಾಂತ್ ಕದ್ರಿ ಅವರಿಗೆ ಲೆಕ್ಕವಿಲ್ಲದಷ್ಟು ಸಲ ಹೇಳಿದ್ದ ನುಡಿಮುತ್ತುಗಳಿವು. 'ವಿರಾಟಪುರದ ವಿರಾಗಿ' ಸಿನಿಮಾದಲ್ಲಿನ ಶಾಸ್ತ್ರೀಯ ರಾಗಗಳ ವಚನಗಳನ್ನು ಹೃದಯಕ್ಕೆ ಇಳಿಸಿಕೊಂಡವರು, ತಂದೆ ಇತ್ತ ಸಂಸ್ಕಾರವನ್ನು ಮಗ ಹೇಗೆ ಕಣ್ಣಿಗೊತ್ತಿಕೊಂಡಿರಬೇಡ ಎಂದು ಹೆಮ್ಮೆಯಿಂದ ಹೇಳತೊಡಗಿದ್ದಾರೆ. 'ನೋಡಲಾಗದೆ ದೇವಾ' ಎಂಬ 'ವಿರಾಟಪುರದ ವಿರಾಗಿ'ಯ ಹಾಡು ಸಹೃದಯರನ್ನು ಕಾಡುತ್ತಿದೆ.

ಹಾನಗಲ್ಲ ಕುಮಾರಸ್ವಾಮಿ ಅರ್ಥಾತ್ ಕುಮಾರ ಶಿವಯೋಗಿಸ್ವಾಮಿ ಅವರ ಬದುಕಿನ ಕಥೆಯನ್ನೇ ವಸ್ತುವಾಗಿಸಿಕೊಂಡ ಸಿನಿಮಾ 'ವಿರಾಟಪುರ ವಿರಾಗಿ'. ಬಿ.ಎಸ್. ಲಿಂಗದೇವರು ಈ ಸಿನಿಮಾ ನಿರ್ದೇಶಿಸಿದ್ದು, ಸಣ್ಣ ಪುಟ್ಟವೂ ಸೇರಿದಂತೆ ಹನ್ನೆರಡು ಹಾಡುಗಳು ಇದರಲ್ಲಿ ಇವೆ. ಮಣಿಕಾಂತ್ ಕದ್ರಿ ಸ್ವರ ಸಂಯೋಜನೆ ಮಾಡಿರುವ ಹಾಡುಗಳಲ್ಲಿನ ಸರಳತೆ ಹಾಗೂ ಶಾಸ್ತ್ರೀಯತೆ ಎರಡಕ್ಕೂ ಅನೇಕರು ತಲೆದೂಗುತ್ತಿದ್ದಾರೆ. ಈ ಅನುಭವವನ್ನು ಮಣಿಕಾಂತ್ ಹೆಮ್ಮೆಯಿಂದ ಹೇಳಿದರು.

'ಗುರುಗಳ ಬಗ್ಗೆ ಸಿನಿಮಾ ಮಾಡುವಾಗ ಹುಷಾರಾಗಿರಬೇಕು. ಯಾವುದೇ ಥಳುಕು ಇಲ್ಲದೆ ತಣ್ಣಗೆ ಕಥೆ ಹೇಳಲು ಹೊರಟವರಿಗೆ ನೆಲದ ಸಂಗೀತ ದಕ್ಕಿಸಿಕೊಡಬೇಕು. ಲಿಂಗದೇವರು ಅವರು ಕೆಲವು ವಚನಗಳನ್ನು ಆಯ್ಕೆ ಮಾಡಿಕೊಂಡಿದ್ದರು. ಪಂಡಿತರನ್ನು ಮಾತನಾಡಿಸಿ, ಅವುಗಳ ಸಾಹಿತ್ಯದಲ್ಲಿ ಇದ್ದ ಕೆಲವು ಪದಗಳ ಅರ್ಥವನ್ನು ನಾವು ದಕ್ಕಿಸಿಕೊಂಡೆವು. ಯಾವುದೇ ಅಪದ್ಧ ಆಗಬಾರದು ಎನ್ನುವುದಷ್ಟೆ ಕಾಳಜಿ. ಭಕ್ತಿ–ಭಾವದ ಮೂಡ್ ಸೃಷ್ಟಿಸಿ, ಹಾಡುಗಳನ್ನು ಮಾಡಿದೆವು' ಎಂದು ಹಾಡು ಕಟ್ಟಿದ ಸಮಯವನ್ನು ಮಣಿಕಾಂತ್ ಹಂಚಿಕೊಂಡರು.

ವಚನಗಳ ಸಾಹಿತ್ಯವೇನೋ ಇತ್ತು. ಆದರೆ ಇಂಥದ್ದೇ ರಾಗದಲ್ಲಿ ಹಾಡಿದ್ದಾರೆ ಎನ್ನುವುದಕ್ಕೆ ಯಾವ ಮಟ್ಟುಗಳೂ ಇರಲಿಲ್ಲ. ಕುಮಾರಸ್ವಾಮಿಯವರು ಪುಟ್ಟರಾಜ ಗವಾಯಿ ಅವರಲ್ಲಿ ಗಾನಸಂಸ್ಕಾರ ಕೊಟ್ಟಿದ್ದೇ ವಿಶೇಷ. ಈ ಒಂದು ಸ್ಥಿತ್ಯಂತರಕ್ಕೆ ತಕ್ಕುದಾದ ಸ್ವರ ಸಂಯೋಜನೆಯನ್ನು ಮಣಿಕಾಂತ್ ಸ್ವಾತಂತ್ರ್ಯ ತೆಗೆದುಕೊಂಡೇ ಮಾಡಿದರು.

'ಪುಟ್ಟರಾಜ ಗವಾಯಿಗಳ ಬಗೆಗೆ ಸಿನಿಮಾ ಮಾಡಿದ್ದಾಗ ಹಂಸಲೇಖ ಸರ್ ಸ್ವಾತಂತ್ರ್ಯ ತೆಗೆದುಕೊಂಡೇ ರಾಗ ಸಂಯೋಜನೆ ಮಾಡಿದ್ದರು. ಅಂಥದೊಂದು ದಾರಿ ನನ್ನ ಎದುರಲ್ಲಿಯೂ ಇತ್ತು. ಅದೇ ಈಗ ಹಾಡಾಗಿ ಮೂಡಿದೆ' ಎನ್ನುವ ಮಣಿಕಾಂತ್, ಮಾತಿಗೆ ವಿನಯವನ್ನು ಸವರಿದರು.

ಹಾಡು ಕಟ್ಟುವ ಕಾಯಕದಲ್ಲಿ ಮಣಿಕಾಂತ್ ಅವರಿಗೆ ಹಿಂದೂಸ್ತಾನಿ ಗಾಯಕ ರವೀಂದ್ರ ಸೋರಗಾವಿ ಅವರ ಪರಿಚಯ ಮೊದಲಿನಿಂದಲೂ ಇತ್ತು. ಕುಮಾರಸ್ವಾಮಿಗಳ ಬದುಕಿಗೂ, ಗವಾಯಿಗಳಿಗೂ ಹಾಗೂ ಸಂಗೀತಕ್ಕೂ ಇದ್ದ ಸಂಬಂಧ ಅವರಿಗೆ ಚೆನ್ನಾಗಿ ಗೊತ್ತಿತ್ತು. ಅದು ಮಣಿಕಾಂತ್ ಅವರಿಗೆ ಅನುಕೂಲವಾಗಿ ಒದಗಿತು. 'ನೋಡಲಾಗದೇ ದೇವಾ' ಹಾಡಿನ ಕಂಠ ಸೋರಗಾವಿ ಅವರದ್ದೇ. ಅವರಷ್ಟೇ ಅಲ್ಲದೆ ಸಂಗೀತಾ ಕಟ್ಟಿ, ಸುಪ್ರಿಯಾ ರಾಮ್ ಹಾಗೂ ಚಿಕ್ಕ ವಯಸ್ಸಿನ ಪ್ರತಿಭೆ ದೀಪ್ತಿ ಭಟ್ ಅವರ ಶಾರೀರವನ್ನು ಹಾಡುಗಳಿಗೆ ಮಣಿಕಾಂತ್ ಬಳಸಿಕೊಂಡಿದ್ದಾರೆ. ಕಲ್ಯಾಣ ವಸಂತ, ಕೀರವಾಣಿ, ಅಹಿರ್ ಭೈರವಿ, ಸಿಂಧು ಭೈರವಿ ಈ ಎಲ್ಲ ರಾಗಗಳಲ್ಲಿ ಹಾಡುಗಳನ್ನು ಸಂಯೋಜನೆ ಮಾಡಿದ್ದಾರೆ.

ಉಲ್ಲಾಳ ಮಹದೇವಪ್ಪ ಎಂಬ ಅನುಭವಿಗಳು ಎಲೆಮರೆಯ ಕಾಯಿಯಂತೆ ಸಂಗೀತವನ್ನು ಪಸರಿಸುತ್ತಿದ್ದಾರೆ. ಅವರಿಂದಲೂ ಮಣಿಕಾಂತ್ ಈ ಸಿನಿಮಾ ಹಾಡುಗಳ ವಿಷಯದಲ್ಲಿ ಜ್ಞಾನ ಪಡೆದುಕೊಂಡಿದ್ದಾರೆ.

ಸ್ವರ ಸಂಯೋಜನೆ ಮಾಡಿದ ಗೀತೆಗಳಿಗೆ

